# ದಾರಿ ನೂರಾರುಂಟು...

'ಫೋನಿನಲ್ಲಿ ಮಾತಾಡುವ ವಿಷಯ ಇದಲ್ಲ. ಟೈಮಿದ್ದಾಗ ಆರಾಮವಾಗಿ ಮಾತಾಡಬೇಕು'– ಡಬ್ಬಿಂಗ್ ಸರಿಯೋ ತಪ್ಪೋ ಎಂಬ ನೇರವಾದ ಪ್ರಶ್ನೆಗೆ ಬಂಡೆಗೆರೆ ಶ್ರೀನಿವಾಸ ಕೊಡುವ ಉತ್ತರ ಇದು. ಇತ್ತೀಚೆಗೆ ಖ್ಯಾತ ನಿರ್ಮಾಪಕ ಬಂಡೆಗೆರೆ, ತಮಿಳುನಾಡಿನಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ನಗರದ ರಿಯಲ್ ಎಸ್ಟೇಟು, ಚಿತ್ರರಂಗದಲ್ಲಿ ಕೈಯಾಡಿಸುತ್ತಿದ್ದಾಗಲೂ ಅವರಿಗೆ ತಮಿಳು ಚಿತ್ರರಂಗದ ಸಖ್ಯವಿತ್ತು. ಈಗೀಗ ಅವರು ಕನ್ನಡ ಸಿನಿಮಾಗಳ ಮೇಲೆ ಹಣ ತೊಡಗಿಸುವುದನ್ನು ಕಡಿಮೆ ಮಾಡಿ, ತಮಿಳು ಚಿತ್ರರಂಗದಲ್ಲಿ ಬಂಡವಾಳ ಪ್ರಯೋಗದಲ್ಲಿ ತೊಡಗಿರುವುದು ಅಚ್ಚರಿಯ ವಿಷಯವೇನಲ್ಲ.

ಹಕ್ಕು ಹೆಕ್ಕಿಕೊಳ್ಳುವುದರಲ್ಲಿ ಅವರು ಮೊದಲಿನಿಂದಲೂ ಪಳಗಿದವರು. ಕಂಗಾಲಾಗಿದ್ದ ಎಷ್ಟೋ ನಟರು, ನಿರ್ದೇಶಕರಿಗೆ ಜೀವಾನಿಲ ಎಂಬಂತೆ ತಮ್ಮ ಬಳಿ ಇದ್ದ ಕೆಲವು ಸೀಡಿಗಳನ್ನು ಕೊಟ್ಟು, 'ಒಮ್ಮೆ ನೋಡಿ... ಆಮೇಲೆ ಮಾಡಿ' ಎಂದು ಕಿವಿಮಾತನ್ನು ಉಸುರುವ ಅವರಲ್ಲಿ ಮಾನವೀಯ ಗುಣಗಳೂ ಇವೆ. ಸಬ್ಜೆಕ್ಟಿಗಾಗಿ ತಡಕಾಡುವ ಮಂದಿಗೆ ಇವರ ಹಕ್ಕುಬ್ಯಾಂಕಿನ ಸೀಡಿಗಳು ದಾರಿದೀಪವಾದ ಉದಾಹರಣೆಗಳೂ ಇವೆ. ನವರಸಗಳನ್ನು ತುಳುಕಿಸಿದ ಅನುಭವ ಇರುವ ನಟ ಒಮ್ಮೆ ತಮ್ಮ ಮನೆಯಲ್ಲಿ ಕುಳಿತು ಮುಂದೆ ಯಾವ ಸಿನಿಮಾ ಮಾಡಬೇಕು ಎಂದು ಚಿಂತಿಸುತ್ತಿದ್ದಾಗ ಅವರ ಕೈಗೆ 'ಬಾಡಿಗಾರ್ಡ್' ಮಲಯಾಳ ಸಿನಿಮಾದ ಸೀಡಿ ಇಟ್ಟು, 'ಒಮ್ಮೆ ನೋಡಿ... ಆಮೇಲೆ ಮಾಡಿ' ಎಂದು ಇದೇ ಬಂಡೆಗೆರೆ ಹೇಳಿದ್ದರು. ಕನ್ನಡದಲ್ಲಿ ಆ ರೀಮೇಕ್ ಬರುವ ಹೊತ್ತಿಗೆ ಹಿಂದಿಯಲ್ಲಿ ಸಲ್ಮಾನ್ ಖಾನ್ ಕೂಡ ಅದೇ ಸಿನಿಮಾದಲ್ಲಿ ನಟಿಸಿದ್ದು ಇನ್ನೊಂದು ತಮಾಷೆ.

ಬಂಡೆಗೆರೆ ಒಂದು ಕಾಲದಲ್ಲಿ ನಿವೇಶನಗಳನ್ನು ಅಭಿವೃದ್ಧಿಪಡಿಸಿ, 'ಕೊಳ್ಳಿರೋ ನೀವೆಲ್ಲರೂ' ಎಂದು ಸಿನಿಮಾದವರೂ ಸೇರಿದಂತೆ ಅನೇಕರಿಗೆ ಮಾರಿದ್ದ ಬುದ್ಧಿವಂತರು. ಒಂದು ಕಡೆ ಚಿತ್ರರಂಗದ ಸೇವೆ. ಇನ್ನೊಂದು ಕಡೆ ರಿಯಲ್ ಎಸ್ಟೇಟ್ ನಾವೆ. ಎರಡೂ ಕಡೆ ಕಾಲಿಟ್ಟುಕೊಂಡು ಬದುಕು ಸವೆಸುತ್ತಾ ಬಂದ ಅವರು ಶಾಲೆಯೊಂದನ್ನು ನಡೆಸುತ್ತಾರೆ. ಹಾಗಾಗಿ ಶೈಕ್ಷಣಿಕ ಕಾಳಜಿಯೂ ಇದೆ ಎನ್ನಬಹುದು. ಬೆಂಗಳೂರು ಹೊರವಲಯದ ಪ್ರದೇಶದಲ್ಲಿ ಮೆಟ್ರೊ ರೈಲುಮಾರ್ಗದ ಬದಿಗೇ ಮಾಲ್ ಕಟ್ಟಿ ಸೈ ಎನಿಸಿಕೊಂಡವರು.

ಒಂದು ಮೂಲದ ಪ್ರಕಾರ ಬಂಡೆಗೆರೆಯವರ ಬತ್ತಳಿಕೆಯಲ್ಲಿ ನೂರಕ್ಕೂ ಹೆಚ್ಚು ರೀಮೇಕ್ ಹಕ್ಕುಗಳಿವೆ. ಬಹುಭಾಷೆಗಳ ಬಹುವಿಧದ ಆ ಚಿತ್ರಗಳಲ್ಲಿ ಕೆಲವು ಹಳೆಯವು. ರೀಮೇಕ್ ಸುಖವುಂಡು, ಭಾವುಕರಾಗಿ ನಕ್ಕು, ಕೆಲವೊಮ್ಮೆ ಅತ್ತು, ಹಣ ಮಾಡಿ, ಆಗೀಗ ಲುಕ್ಸಾನು ಮಾಡಿಕೊಂಡು ಪಕ್ಕಾ ವ್ಯವಹಾರಸ್ಥರಂತೆಯೇ ಇದ್ದ ಅವರಿಗೆ ದೂರದೃಷ್ಟಿ ಚೆನ್ನಾಗಿದೆ. ವ್ಯವಹಾರ ಕುದುರಿಸಬಲ್ಲ ತಾಕತ್ತೂ ಇದೆ. ಡಬ್ಬಿಂಗ್ ದಿಡ್ಡಿಬಾಗಿಲು ತೆರೆದುಕೊಂಡರೂ ಅವರು ನಗುತ್ತಲೇ ಇರುತ್ತಾರೆ. ಹಕ್ಕುಗಳ ಬತ್ತಳಿಕೆ ಅವರದ್ದೇ ಅಲ್ಲವೇ? 'ರೀಮೇಕಾದರೇನು ಶಿವಾ, ಡಬ್ಬಿಂಗ್ ಆದರೇನು ಶಿವಾ' ಎಂದು ಹೇಳುವವರ ಪೈಕಿ ಅವರದ್ದೇ ಮುಖ್ಯ ಹೆಸರು. ಅಂದಹಾಗೆ, ಅವರಿಗೆ ಚಿತ್ರರಂಗದ ಬಗೆಗೆ ಖಂಡಿತ ಕಾಳಜಿ ಇದೆ. ಅದಕ್ಕೇ ಗಂಭೀರ ವಿಷಯಗಳ ಕುರಿತು ಅವರು ಫೋನ್‌ನಲ್ಲಿ ಮಾತನಾಡುವುದಿಲ್ಲ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68